www.prepp.in

Prepp
Your Personal Exams Guide

2015

Dinesha. S. C

EXAMINATION CODE : **06** TET-I

ಪ್ರಶ್ನೆಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | | |
|---|---|---|---|---|---|---|---|---|
| 1 | 3 | 2 | 0 | 7 | 4 | 4 | 5 | 6 |

86

~~2016~~ 4040627

21/07/15

KM

# ಪ್ರಶ್ನೆ ಪತ್ರಿಕೆ ಪುಸ್ತಿಕೆ-ಪತ್ರಿಕೆ-I
## (ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ)

ವಿಷಯಗಳು : ಭಾಷೆ 1: (ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಸಂಸ್ಕೃತ)
ಭಾಷೆ 2: (ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಸಂಸ್ಕೃತ)
ಬಾಲವಿಕಾಸ ಮತ್ತು ಪೆಡಗಾಗಿ, ಗಣಿತ, ಪರಿಸರ ವಿಜ್ಞಾನ

ಗರಿಷ್ಠ ಅಂಕಗಳು : 150 09.30 A.M To 12.00 P.M ಗರಿಷ್ಠ ಅವಧಿ : 2.30 ಗಂಟೆಗಳು

### ಅಭ್ಯರ್ಥಿಗಳಿಗೆ ಸೂಚನೆಗಳು (ಪ್ರಶ್ನೆಪತ್ರಿಕೆಯಲ್ಲಿನಎಲ್ಲಾಸೂಚನೆಗಳನ್ನು ದಯವಿಟ್ಟು ಓದಿ)

1. ಮೊಹರು ಮಾಡಲಾದ / ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯು 150 ಬಹುಆಯ್ಕೆಯ ಪ್ರಶ್ನೆಗಳನ್ನು ಹಾಗೂ ಬಿಡಿ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಒಳಗೊಂಡಿರುತ್ತದೆ. ಪ್ರಶ್ನೆಪತ್ರಿಕೆ ಪುಸ್ತಿಕೆಯು ಅಭ್ಯರ್ಥಿಯು ಆಯ್ಕೆ ಮಾಡಿಕೊಂಡಿರುವ ಪತ್ರಿಕೆ / ಮಾಧ್ಯಮಕ್ಕೆ ಸಂಬಂಧಿಸಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು.
2. ಈ ಪ್ರಶ್ನೆ ಪತ್ರಿಕೆಯು ಭಾಗ-I, ಭಾಗ-II, ಭಾಗ-III, ಭಾಗ-IV ಮತ್ತು ಭಾಗ-V ಎಂದು ಒಟ್ಟು 5 ಭಾಗಗಳನ್ನು ಹೊಂದಿದ್ದು, 150 ಬಹು ಆಯ್ಕೆ ಪ್ರಶ್ನೆಗಳನ್ನು ಹೊಂದಿರುತ್ತದೆ. ಪ್ರತಿ ಪ್ರಶ್ನೆಗೂ ಒಂದು ಅಂಕ ನಿಗದಿಪಡಿಸಲಾಗಿದೆ.
   ಭಾಗ-I ಭಾಷೆ 1:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)(ಪ್ರಶ್ನೆಸಂಖ್ಯೆ 1ರಿಂದ 30)
   ಭಾಗ-II ಭಾಷೆ 2:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)(ಪ್ರಶ್ನೆಸಂಖ್ಯೆ 31ರಿಂದ 60)
   ಭಾಗ-III: ಬಾಲವಿಕಾಸಮತ್ತುಪೆಡಗಾಗಿ (ಪ್ರಶ್ನೆಸಂಖ್ಯೆ 61ರಿಂದ 90)
   ಭಾಗ-IV: ಗಣಿತ (ಪ್ರಶ್ನೆಸಂಖ್ಯೆ 91ರಿಂದ 120)
   ಭಾಗ-V: ಪರಿಸರ ವಿಜ್ಞಾನ (ಪ್ರಶ್ನೆಸಂಖ್ಯೆ 121ರಿಂದ 150)
3. ಭಾಗ-I ರಲ್ಲಿಭಾಷೆ-1 ವಿಷಯಕ್ಕೆಸಂಬಂಧಿಸಿದಂತೆ 30 ಪ್ರಶ್ನೆಗಳನ್ನುಮತ್ತುಭಾಗ-II ರಲ್ಲಿಭಾಷೆ-2 ವಿಷಯಕ್ಕೆಸಂಬಂಧಿಸಿದಂತೆ 30 ಪ್ರಶ್ನೆಗಳನ್ನು ಹೊಂದಿರುತ್ತದೆ. ಈಪ್ರಶ್ನೆಪತ್ರಿಕೆಪುಸ್ತಿಕೆಯಲ್ಲಿ ಎಲ್ಲಾಭಾಷೆಗಳಿಗೂಸಂಬಂಧಿಸಿದಂತೆಪ್ರಶ್ನೆಗಳು ಇರುತ್ತವೆ. ಆದರೆಅಭ್ಯರ್ಥಿಗಳುಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ / ಪ್ರವೇಶ ಪತ್ರದಲ್ಲಿ ನಮೂದಿಸಿರುವ ಭಾಷೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಭಾಷೆ-1 ಮತ್ತು ಭಾಷೆ-2 ಕ್ಕೆ ಉತ್ತರಿಸುವುದುಕಡ್ಡಾಯವಾಗಿರುತ್ತದೆ.
4. ಅಭ್ಯರ್ಥಿಗಳು ಭಾಗ-II ರಲ್ಲಿನ ಭಾಷೆ-2 ಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸುವಾಗ ಭಾಷೆ-1 ನ್ನು (ಭಾಗ-I) ಹೊರತುಪಡಿಸಿ ಇತರೆ ಭಾಷೆಯನ್ನುಆಯ್ಕೆಮಾಡಿಕೊಂಡುಉತ್ತರಿಸಬೇಕು.
5. ಈಪ್ರಶ್ನೆಪತ್ರಿಕೆಪುಸ್ತಿಕೆಯಲ್ಲಿ ಭಾಗ-III, ಭಾಗ-IV ಮತ್ತುಭಾಗ-V ಕ್ಕೆಸಂಬಂಧಿಸಿದಂತೆಒಂದುಅಥವಾಒಂದಕ್ಕಿಂತಹೆಚ್ಚುಮಾಧ್ಯಮಗಳಲ್ಲಿ ಪ್ರಶ್ನೆಗಳನ್ನುನೀಡಲಾಗಿದೆ. ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ಆಯ್ಕೆಮಾಡಿಕೊಂಡಿರುವ/ಪ್ರವೇಶಪತ್ರದಲ್ಲಿ ನಮೂದಿಸಿರುವ ಮಾಧ್ಯಮದ ಪ್ರಶ್ನೆಗಳಿಗೆಮಾತ್ರಉತ್ತರನೀಡಬೇಕು..
6. ಪ್ರಶ್ನೆಪತ್ರಿಕೆ ಪುಸ್ತಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ, ಅಡಕವಾಗಿರುವ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಹೊರತೆಗೆಯುವುದು. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿನ ಕ್ರಮಸಂಖ್ಯೆ 1 ರಿಂದ 12 ರವರೆಗಿನ ಎಲ್ಲಾ ಮಾಹಿತಿಯನ್ನು ಅತೀ ಜಾಗರೂಕತೆಯಿಂದ ಭರ್ತಿ ಮಾಡುವುದು. ಭರ್ತಿ ಮಾಡದೇ ಖಾಲಿ ಉಳಿದ ಸಂದರ್ಭದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.
7. ಓ.ಎಂ.ಆರ್. ಉತ್ತರಪತ್ರಿಕೆಯು ಕಾರ್ಬನ್ ಸಹಿತ ಪ್ರತಿಯನ್ನು ಒಳಗೊಂಡಿರುತ್ತದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ್ ರಹಿತ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
8. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕ್ಯುಲೇಟರ್, ಮೊಬೈಲ್ ಹಾಗೂ ಇತರೆ ವಿದ್ಯುನ್ಮಾನ ಉಪಕರಣಗಳ ಬಳಕೆಯನ್ನು ನಿಷೇಧಿಸಿದೆ.
9. ಪರೀಕ್ಷಾಸಮಯದಲ್ಲಿ ಯಾವುದೇ ರೀತಿಯ ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಯ ಮೇಲೆ ಪರೀಕ್ಷಾ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.
10. ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಪ್ರತಿಪ್ರಶ್ನೆಗೆಸರಿ ಹೊಂದುವಉತ್ತರವನ್ನುಗುರುತಿಸಲುನೀಡಲಾಗಿರುವನಾಲ್ಕುವೃತ್ತಗಳಪೈಕಿಸರಿಯಾದ ವೃತ್ತವನ್ನುನೀಲಿ/ಕಪ್ಪು ಶಾಯಿಯಬಾಲ್‌ಪಾಯಿಂಟ್‌ಪೆನ್‌ಮಾತ್ರಉಪಯೋಗಿಸಿಗುರುತುಮಾಡುವುದು. ಉತ್ತರವನ್ನುತುಂಬಿದಮೇಲೆ ಬದಲಿಸಲುಪ್ರಯತ್ನಿಸಬೇಡಿ.

SEAL

www.prepp.in

Prepp
Your Personal Exams Guide



# PART-I
## Language – I : KANNADA
## ಪ್ರಥಮ ಭಾಷೆ ಕನ್ನಡ
### ಭಾಗ-I

ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಓದಿ ಮುಂದಿನ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ 1 ರಿಂದ 8 ರವರೆಗೆ) ಉತ್ತರಿಸಿ.

ಇದು ಅಮೇರಿಕದ ಇಂಡಿಯಾನಾ ಆಸ್ಪತ್ರೆಯಲ್ಲಿ ನಡೆದ ಘಟನೆ. ನಲ್ವತ್ತು ವರ್ಷ ವಯಸ್ಸಿನ ಹೆಂಗಸೊಬ್ಬಳು ಯಕೃತ್ ಸಂಬಂಧವಾದ ಕಾಯಿಲೆಯಿಂದ ಹಲವು ಬಾರಿ ಸಾವನ್ನು ಸಮೀಪಿಸಿದ್ದಳೂ ಬದುಕಿ ಉಳಿದಿದ್ದಳು. ಒಮ್ಮೆ ಆ ರೋಗ ಬಹಳಷ್ಟು ಉಲ್ಬಣಗೊಂಡು, ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿದರು. ಒಂದು ಮಧ್ಯಾಹ್ನ ಆಕೆ ಮೇಲುಸಿರು ಬಿಡುತ್ತ ಸಾವಿನೊಡನೆ ಸೆಣಸುತ್ತಿದ್ದುದನ್ನು ಕಂಡ ಆಸ್ಪತ್ರೆಯ ದಾದಿಯೊಬ್ಬಳು, ಡಾಕ್ಟರುಗಳನ್ನು ಕರೆತರಲು ಹೊರಗೆ ಧಾವಿಸಿದರು. ಆ ಹೊತ್ತಿನಲ್ಲೇ ಆ ರೋಗಿಗೆ ಒಂದು ಅಪೂರ್ವವಾದ ಅನುಭವವಾಯಿತು. ಆಕೆ ದೇಹದ ಹೊರಗೆ ಬಂದು ಆ ಕೋಣೆಯ ಮೇಲ್ಭಾಗದಲ್ಲಿ, ಆಕಾಶದಲ್ಲಿ ಮೋಡವು ತೇಲುವಂತೆ ತೇಲುತ್ತ ಮಂಚದಲ್ಲಿ ಮಲಗಿದ್ದ ತನ್ನ ಶರೀರವನ್ನೇ ಕಂಡಳು ! ತನ್ನ ಮುಖ ಎಷ್ಟೊಂದು ಬಾಡಿ ಸೊರಗಿದೆ ಎಂಬುದೂ ಅವಳಿಗೆ ಆಗ ಗೋಚರಿಸಿತು. ಅದೇ ಹೊತ್ತಿನಲ್ಲಿ ಆಕೆಗೆ ಒಂದು ತೆರನಾದ ಅಪೂರ್ವ ಶಾಂತಿ ಮತ್ತು ಬಂಧಮುಕ್ತ ಭಾವನೆಯ ಅರಿವೂ ಆಯಿತು. ಈ ಘಟನೆಯ ಇನ್ನೂ ಆಶ್ಚರ್ಯದ ಅಂಶವೆಂದರೆ ದೇಹದಿಂದ ಹೊರಗೆ, ಕೋಣೆಯ ಮೇಲ್ಭಾಗದಲ್ಲಿ ತೇಲುತ್ತಿದ್ದ ಆಕೆ, ಅಲ್ಲಿ ಗುಂಪುಗೂಡಿಕೊಂಡು ತನ್ನ ಶರೀರದಲ್ಲಿ ಪುನಃ ಪ್ರಾಣಪ್ರತಿಷ್ಠೆ ಮಾಡಲು ಹೆಣಗುತ್ತಿದ್ದ ಡಾಕ್ಟರುಗಳ ಚಟುವಟಿಕೆಗಳನ್ನೂ ಚೆನ್ನಾಗಿ ವೀಕ್ಷಿಸಬಲ್ಲವಳಾಗಿದ್ದಳು ! ಅವರೆಲ್ಲಾ ಆಗಾಗ ಆಡುತ್ತಿದ್ದ ಮಾತುಗಳೂ ಅವಳಿಗೆ ಸರಿಯಾಗಿ ಕೇಳಿಸುತ್ತಿದ್ದುವು. ಆ ವೈದ್ಯರ ಗುಂಪಿನಲ್ಲಿದ್ದ ಒಬ್ಬಾತ ಹಾಸ್ಯದ ಚಟಾಕಿಯನ್ನು ಹಾರಿಸಿ, ಗಂಭೀರವಾದ ವಾತಾವರಣವನ್ನು ಸ್ವಲ್ಪ ಲಘುವಾಗಿ ಮಾಡಲು ಯತ್ನಿಸಿದ್ದ. ಅವನಾಡಿದ ಹಾಸ್ಯದ ಮಾತನ್ನೂ ಅವಳು ಕೇಳಿಸಿಕೊಂಡಿದ್ದಳು. ಆ ವೈದ್ಯರನ್ನು ಸಂಬೋಧಿಸಿ ಅಷ್ಟೊಂದು ಶ್ರಮಿಸಬೇಡಿ, ಎಲ್ಲವೂ ಸರಿಯಾಗಿದೆ ಎಂದು ಹೇಳಲು ಯತ್ನಿಸಿದಳು. ಆದರೆ ಅವಳ ಶ್ವಾಸೋಚ್ಛ್ವಾಸ ಕ್ರಿಯೆ, ನಾಡಿಬಡಿತ ನಿಂತಿದ್ದವು, ರಕ್ತದ ಒತ್ತಡವಿರಲಿಲ್ಲ, ಮೆದುಳಿನ ಅಲೆಗಳ ಕ್ರಿಯೆಯೂ ನಿಂತಿತ್ತು. ಅಲ್ಲಿ ಸೇರಿದ್ದ ವೈದ್ಯರೆಲ್ಲ ಆಕೆ ಸತ್ತಿದ್ದಾಳೆ ಎಂದು ಹೇಳಿಕೆಯನ್ನಿತ್ತರು. ಆಶ್ಚರ್ಯದ ಸಂಗತಿ ಎಂದರೆ ಸುಮಾರು ಮೂರು ಗಂಟೆಗಳ ಬಳಿಕ ಅವಳು ತನ್ನ ದೇಹಕ್ಕೆ ಹಿಂದಿರುಗಿದಳು ! ಮಿದುಳಿಗೆ ಯಾವ ತರದ ಆಘಾತ, ತೊಂದರೆಗಳು ಆಗದೆ, ಆಕೆ ಮತ್ತೆ ಹದಿನೆಂಟು ತಿಂಗಳುಗಳ ಕಾಲ ಬದುಕಿದ್ದಳು.

1. ಹೆಂಗಸಿನ ರೋಗ ತೀವ್ರ ಸ್ವರೂಪ ಗೊಂಡಾಗ
   (1) ಪ್ರಥಮ ಚಿಕಿತ್ಸೆ ನೀಡಿದರು
   (2) ವೈದ್ಯರನ್ನು ಭೇಟಿಯಾದರು
   (3) ಆಸ್ಪತ್ರೆಗೆ ಸೇರಿಸಲು ಮುಂದಾದರು
   (4) ಆಸ್ಪತ್ರೆಗೆ ದಾಖಲಿಸಿದರು

2. ಇಂಡಿಯಾನ ಆಸ್ಪತ್ರೆಯಲ್ಲಿ ನಡೆದ ಘಟನೆ
   (1) ಆಸ್ಪತ್ರೆಯಲ್ಲಿ ಗಂಭೀರವಾದ ವಾತಾವರಣ ಸೃಷ್ಠಿಯಾಯಿತು
   (2) ಆಕಾಶದಲ್ಲಿ ರೋಗಿಯ ದೇಹ ಹೊರಳಾಡಿತು
   (3) ವೈದ್ಯರು ಚಟುವಟಿಕೆಯಿಂದ ಕಾರ್ಯ ನಿರ್ವಹಿಸಿದರು
   (4) ಹೆಂಗಸು ಸತ್ತ ನಂತರ ದೇಹಕ್ಕೆ ಹಿಂದಿರುಗಿದ್ದು

www.prepp.in



3. ಹೆಂಗಸು ತನ್ನ ದೇಹವನ್ನು ಪುನಃ ಸೇರಿಕೊಂಡಿದ್ದು

(1) ಸತ್ತ ಮೂರು ಗಂಟೆಗಳ ಮೊದಲು
(2) ಬದುಕಿದ ಮೂರು ಗಂಟೆಗಳ ನಂತರ
(3) ಸತ್ತ ಮೂರು ಗಂಟೆಗಳ ನಂತರ
(4) ಬದುಕಿದ ಮೂರು ಗಂಟೆಗಳ ಮೊದಲು

4. ರೋಗಿಗೆ ಆಸ್ಪತ್ರೆಯಲ್ಲಿ ಆದ ಅಪೂರ್ವವಾದ ಅನುಭವ

(1) ಆಗಸದಲ್ಲಿ ಮೋಡ ತೇಲುವಂತೆ ತೇಲುತ್ತಿರುವುದು
(2) ಸಾವಿನೊಡನೆ ಸೆಣಸಾಡುತ್ತಿರುವುದು
(3) ಕೋಣೆಯ ಹೊರಗೆ ಆತ್ಮ ಹೋಗುತ್ತಿರುವುದು
(4) ಮೇಲುಸಿರು ಬಿಡುತ್ತಿರುವುದು

5. ಹೆಂಗಸಿನ ದೇಹದಿಂದ ಉಸಿರು ಹೊರ ಹೋದಾಗ ಆದ ಅರಿವಿನ ಭಾವನೆ

(1) ಬಂಧಮುಕ್ತ ಮತ್ತು ಅಶಾಂತಿ ಭಾವನೆ
(2) ಕೋಣೆಯ ಮೇಲ್ಭಾಗದಲ್ಲಿ ತೇಲುತ್ತಿರುವ ಭಾವನೆ
(3) ಶಾಂತಿ ಮತ್ತು ಬಂಧಮುಕ್ತ ಭಾವನೆ
(4) ಬಂಧಮುಕ್ತ ಮತ್ತು ದೇಹತ್ಯಾಗದ ಸ್ಥಿತಿ

6. 'ಪ್ರಾಣಪ್ರತಿಷ್ಠೆ' ಈ ಪದದ ಅರ್ಥ

(1) ದೇಹದಿಂದ ಉಸಿರು ಹೊರ ಹೋಗದಂತೆ ಚಿಕಿತ್ಸೆ ನೀಡುವುದು
(2) ದೇಹವು ಪುನಃ ಉಸಿರಾಡುವಂತೆ ಮಾಡುವುದು
(3) ದೇಹದಲ್ಲಿ ಸ್ಮೃತಿ ಇರುವಂತೆ ಮಾಡುವುದು
(4) ದೇಹಕ್ಕೆ ಅರವಳಿಕೆ ಚಿಕಿತ್ಸೆ ನೀಡುವುದು

7. ವೈದ್ಯರೆಲ್ಲರೂ ರೋಗಿ ಸತ್ತಿದ್ದಾಳೆಂದು ತೀರ್ಮಾನಿಸಲು ಕಾರಣ

(1) ಮೆದುಳು ಕಾರ್ಯ ನಿರ್ವಹಿಸುತ್ತಿರಲಿಲ್ಲ, ರಕ್ತದೊತ್ತಡವಿರಲಿಲ್ಲ, ಉಸಿರಾಟ ಮತ್ತು ನಾಡಿಮಿಡಿತ ನಿಂತಿತ್ತು.
(2) ಮೆದುಳು ಕಾರ್ಯ ನಿರ್ವಹಿಸುತ್ತಿತ್ತು, ರಕ್ತದೊತ್ತಡವಿರಲಿಲ್ಲ, ಉಸಿರಾಟ ಮತ್ತು ನಾಡಿಮಿಡಿತ ನಿಂತಿತ್ತು.
(3) ಮೆದುಳು ನಿಷ್ಕ್ರಿಯವಾಗಿತ್ತು, ರಕ್ತದೊತ್ತಡವಿತ್ತು, ಉಸಿರಾಟ ಮತ್ತು ನಾಡಿಮಿಡಿತ ನಡೆಯುತ್ತಿತ್ತು.
(4) ಮೆದುಳು ಕಾರ್ಯ ನಿರ್ವಹಿಸುತ್ತಿತ್ತು, ರಕ್ತದೊತ್ತಡವಿತ್ತು, ಉಸಿರಾಟ ಮತ್ತು ನಾಡಿಮಿಡಿತ ನಡೆಯುತ್ತಿತ್ತು.

8. 'ಚಟಾಕಿಯನ್ನು' ಈ ಪದವು ಕೆಳಗಿನ ಸಂಧಿಗೆ ಉದಾಹರಣೆ

(1) ಲೋಪಸಂಧಿ
(2) ಆದೇಶಸಂಧಿ
(3) ಗುಣಸಂಧಿ
(4) ಆಗಮಸಂಧಿ

www.prepp.in



**ಸೂಚನೆ :** ಕೆಳಗಿನ ಪದ್ಯಭಾಗವನ್ನು ಓದಿ ಮುಂದಿನ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ **9** ರಿಂದ **15** ರವರೆಗೆ) ಉತ್ತರಿಸಿ.

ಕುಂಬಾರಕಿ ಈಕಿ ಕುಂಬಾರಕಿ ಈ
ಬ್ರಹ್ಮಾಂಡವೆಲ್ಲ ತುಂಬಿಕೊಂಡಿರುವಾಕಿ

ಚಿನ್ನ ಎಂಬುವ ಮಣ್ಣನು ತರಸಿ
ತನು ಎಂಬುವ ನೀರನು ಹಣಿಸಿ
ಮನ ಎಂಬುವ ಹುದಲನು ಕಲಸಿ
ಗುಣ ಎಂಬುವ ಸೂಸನು ಹಾಕಿ

ಭಕ್ತಿ ಎಂಬುವ ತಿಗರಿಯ ಮಾಡಿ
ಧ್ಯಾನ ಎಂಬುವ ಬಡಗಿಯ ಊರಿ
ಮುನ್ನೂರರವತ್ತು ಸುತ್ತನು ತಿರುಗಿ
ಗಡಗಿ ತಯಾರು ಮಾಡುವಾಕಿ

ಆಚಾರ ಎಂಬುವ ಆವಿಗೆ ಮುಚ್ಚಿ
ಅರಿವು ಎಂಬುವ ಬೆಂಕಿಯ ಹಚ್ಚಿ
ಸಾವಿರ ಕೊಡಗಳ ಸುಟ್ಟು ಇಂದು
ಸಂತಿಗೆ ಒಯ್ದು ಮಾರುವಾಕಿ

ಮೂರು ಕಾಸಿಗೊಂದು ಕುಡಕಿಯ ಮಾರಿ
ಆರು ಕಾಸಿಗೊಂದು ಗಡಿಗೆಯ ಮಾರಿ
ವಸುಧೆಯೊಳು ಶಿಶುನಾಳಧೀಶನ ಮುಂದೆ
ಧ್ಯಾನದ ಮಗಿಯೊಂದು ಇಡುವಾಕಿ

**9.** ಈ ಪದ್ಯದ ಹಿನ್ನೆಲೆಯಲ್ಲಿ 'ಬಡಗಿ' ಪದದ ಅರ್ಥ

(1) ಧ್ಯಾನಸ್ತ ಬಡಗಿ
(2) ತಿಗರಿಯನ್ನು ತಿರುಗಿಸುವ ಕೋಲು
(3) ಗಡಗಿ ತಯಾರಿಸುವ ಮರದ ಚಕ್ಕೆ
(4) ಬಡ ಮಹಿಳೆಯ ಭಕ್ತಿ

**10.** 'ಬ್ರಹ್ಮಾಂಡವನ್ನೆಲ್ಲ ತಲೆಯಲ್ಲಿ ತುಂಬಿ ಕೊಂಡಿರುವಾಕೆ ಈ ಕುಂಬಾರಕಿ' ಈ ಮಾತಿನ ಅರ್ಥ

(1) ಬ್ರಹ್ಮಜ್ಞಾನದಿಂದ ಪುನೀತರಾಗಿರುವ ಕುಂಬಾರಕಿಯ ವೃತ್ತಿ
(2) ತನ್ನ ವೃತ್ತಿಯಲ್ಲಿ ಅದ್ಭುತ, ಅನನ್ಯ, ಕುಶಲತೆ ಹೊಂದಿರುವ ಕುಂಬಾರಕಿ
(3) ಶ್ರಮ ಮತ್ತು ಶ್ರದ್ಧೆಗಳಿಂದ ಮಡಕೆ ತಯಾರಿಸುವ ವೃತ್ತಿ
(4) ಮಣ್ಣನ್ನು ಚಿನ್ನವನ್ನಾಗಿ ಮಾಡುವ ವಿದ್ಯೆಯನ್ನು ಕರಗತ ಮಾಡಿಕೊಂಡಿರುವ ಮಹಿಳೆ

**11.** 'ಹುದಲ' ಎಂದರೆ

(1) ಮರಳು (2) ಕಲ್ಲು (3) ನೀರು (4) ಮಣ್ಣು

**12.** 'ಭಕ್ತಿ' ತತ್ಸಮ ಪದಕ್ಕೆ ತದ್ಭವ ರೂಪ

(1) ಭಕ್ತ (2) ಭವಿ (3) ಭಕುತಿ (4) ಭಯ

**13.** ಶಿಶುನಾಳ ಶರೀಫರು ಈ ರೀತಿ ಖ್ಯಾತರಾಗಿದ್ದಾರೆ

(1) ಕನ್ನಡ ಶಿಷ್ಟ ಸಂಪ್ರದಾಯ ಕವಿ
(2) ಕನ್ನಡದ ಲಾಕ್ಷಣೀಕ
(3) ಕನ್ನಡದ ಕಬೀರ
(4) ಕನ್ನಡದ ಪ್ರೇಮಕವಿ

www.prepp.in



14. ಕುಂಬಾರಕಿಯು ತನ್ನ ಗುರುವಿನ ಮುಂದೆ ಇಡುವ ಮಗಿ ಇದರ ಸಂಕೇತ
(1) ಕಾಯಕದ ಸಂಕೇತ (2) ಧ್ಯಾನದ ಸಂಕೇತ
(3) ಭಕ್ತಿಯ ಸಂಕೇತ (4) ತ್ಯಾಗದ ಸಂಕೇತ

15. ಇವುಗಳ ಸಂಯೋಗದಿಂದ ಮಡಕೆ ತಯಾರಾಗುವುದು
(1) ಕಲ್ಲು, ಮಣ್ಣು, ಕಲ್ಪನೆ (2) ಗುಣ, ನಂಬಿಕೆ, ಆಚಾರ
(3) ಮಣ್ಣು, ನೀರು, ಭಕ್ತಿ (4) ಅರಿವು, ಬೆಂಕಿ, ನೀರು

16. ಮಕ್ಕಳ ಭಾಷಾ ಕಲಿಕೆಯ ಆರಂಭದಲ್ಲಿ ಈ ಅಂಶವನ್ನು ಹೆಚ್ಚು ಪರಿಗಣಿಸುವ ಅಗತ್ಯವಿಲ್ಲ.
(1) ಸಹಜ ಸಂವಹನಕ್ಕೆ ಅವಕಾಶ ಕಲ್ಪಿಸುವುದು
(2) ಮಕ್ಕಳ ಭಾಷಾ ಶುದ್ಧತೆಗೆ ಒತ್ತು ನೀಡುವುದು
(3) ಮಾತನಾಡಲು ಮುಕ್ತ ಅವಕಾಶಗಳನ್ನು ಒದಗಿಸುವುದು
(4) ಸಮ ವಯಸ್ಕರೊಂದಿಗೆ ಸಹಜ ಮಾತುಕಥೆಗೆ ಅವಕಾಶ

17. ಅರ್ಥಬದ್ಧ ಆಲಿಸುವಿಕೆಯಲ್ಲಿ ಈ ಅಂಶ ಹೆಚ್ಚು ಸಹಾಯಕ
(1) ಕಿವಿಗೊಟ್ಟು ಸಂತಸದಿಂದ ಆಲಿಸುವುದು
(2) ಕೇಳುವ ಎಲ್ಲಾ ಅಂಶಗಳನ್ನು ಟಿಪ್ಪಣಿಸುವುದು
(3) ಹೇಳುವವರ ಆಂಗಿಕ ಭಾವಗಳನ್ನು ನೋಡುತ್ತಾ ಆಲಿಸುವುದು
(4) ಪದ ಮತ್ತು ವಾಕ್ಯಗಳನ್ನು ಬಿಡಿ ಬಿಡಿಯಾಗಿ ಆಲಿಸಿ ಗ್ರಹಿಸುವುದು

18. ಭಾಷಾ ಶಿಕ್ಷಣದಲ್ಲಿ ವ್ಯಾಕರಣ ಬೋಧಿಸಲು ಸೂಕ್ತ ಕ್ರಮ
(1) ವ್ಯಾಕರಣಾಂಶಗಳ ಸಾಂದರ್ಭಿಕ ಪರಿಚಯ ಮತ್ತು ಅನ್ವಯ
(2) ಶಾಸ್ತ್ರೀಯ ಕ್ರಮದೊಂದಿಗೆ ಪ್ರತ್ಯೇಕವಾಗಿ ಕಲಿಸುವುದು
(3) ವ್ಯಾಕರಣವನ್ನು ಕಲಿಸುವ ಅಗತ್ಯ ಇರುವುದಿಲ್ಲ
(4) ಪರಿಹಾರ ಬೋಧನಾ ತರಗತಿಗಳಲ್ಲಿ ಪರಿಚಯಿಸುವುದು

19. ಗದ್ಯ ಬೋಧನೆಯ ಮುಖ್ಯ ಉದ್ದೇಶ
(1) ವಿಷಯ ಸಂಗ್ರಹಣೆ ಹಾಗೂ ಕಲಿಕೆಗೆ ಸಹಾಯಕ
(2) ಓದು-ಬರಹ, ಗ್ರಹಿಕೆ ಹಾಗೂ ಸ್ವತಂತ್ರ ಆಲೋಚನೆ
(3) ಗಾಯನ ಕಲೆಯಲ್ಲಿ ತರಬೇತಿಗೊಳಿಸುವುದು
(4) ರಸಾನುಭವವನ್ನು ಉತ್ತೇಜಿಸುವುದು

20. ಮಾತನಾಡುವ ಕೌಶಲವನ್ನು ಬೆಳೆಸಲು ಹೆಚ್ಚು ಸಹಾಯಕವಾಗುವ ಚಟುವಟಿಕೆ
(1) ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗಿಯಾಗುವುದರಿಂದ
(2) ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮಗಳನ್ನು ಕೇಳುವುದರಿಂದ
(3) ಅರ್ಥಗ್ರಹಿಕೆ ವಾಚನ ಅಭ್ಯಾಸಗಳು
(4) ಸಂಭಾಷಣೆ ಮತ್ತು ಸಂವಹನ ಚಟುವಟಿಕೆಗಳು

21. ಇದು ಬಾಯೋದಿನಲ್ಲಿ ಕಂಡು ಬರುವ ದೋಷ
(1) ಅರ್ಥಗ್ರಹಿಸುತ್ತ ಓದುವುದು (2) ಧ್ವನಿ ಏರಿಳಿತಗಳೊಂದಿಗೆ ಓದುವುದು
(3) ಪದಗಳನ್ನು ಕೂಡಿಸಿ ಓದುವುದು (4) ಓದಿನಲ್ಲಿ ಹಿಮ್ಮರಳುವಿಕೆ

www.prepp.in



22. ಪದ್ಯ ಬೋಧನೆಯ ಪ್ರಮುಖ ಉದ್ದೇಶ
(1) ಪದ್ಯ ವಿಶ್ಲೇಷಣೆ ಸಾಮರ್ಥ್ಯ ಬೆಳೆಸುವುದು
(2) ಪದ್ಯ ರಚನಾ ಸೂತ್ರಗಳನ್ನು ವಿಮರ್ಶಿಸುವುದು
(3) ಪದ್ಯದ ರಚನಾ ವಿನ್ಯಾಸ ಹಾಗೂ ಕವಿಯ ಭಾವನೆಗಳನ್ನು ಅರಿತು ಸ್ಪಂದಿಸುವುದು
(4) ಪದ್ಯದಲ್ಲಿನ ವ್ಯಾಕರಣಾಂಶವನ್ನು ವಿಶ್ಲೇಷಿಸುವುದು

23. ಪರಿಹಾರ ಬೋಧನೆ ಕೈಗೊಳ್ಳಬೇಕಾಗಿರುವುದು
(1) ಸಹ-ಪಠ್ಯ ಚಟುವಟಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ
(2) ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ
(3) ಕಿರು ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದವರಿಗೆ
(4) ತರಗತಿಯಲ್ಲಿ ಹೆಚ್ಚು ಮಾತನಾಡುವ ವಿದ್ಯಾರ್ಥಿಗಳಿಗೆ

24. ವಿದ್ಯಾರ್ಥಿಗಳಿಗೆ ಚುಟುಕು, ಕಥೆ ಮತ್ತು ಕವನ ರಚನೆಯ ಅಭ್ಯಾಸಗಳನ್ನು ಕಲಿಸುವುದರಿಂದ
(1) ಸೃಜನಾತ್ಮಕ ಬರವಣಿಗೆ ಮೂಡುತ್ತದೆ
(2) ದುಂಡಾಗಿ ಬರೆಯಲು ಕಲಿಯುತ್ತಾರೆ
(3) ವಿಮರ್ಶಾತ್ಮಕ ಬರವಣಿಗೆ ರೂಪುಗೊಳ್ಳುತ್ತದೆ
(4) ವಿಶ್ಲೇಷಣಾತ್ಮಕವಾಗಿ ಬರೆಯಲು ಕಲಿಯುತ್ತಾರೆ

25. ಪದ್ಯ ಬೋಧನೆಯಲ್ಲಿ ಪರಿಣಾಮಕಾರಿ ಕಲಿಕೆಯಾಗಲು ಇದು ಕಾರಣವಾಗುತ್ತದೆ
(1) ಪದ್ಯದ ವಿಶ್ಲೇಷಣಾತ್ಮಕ ಬೋಧನೆ
(2) ಪದ್ಯ ಗಾಯನ ಮತ್ತು ಭಾವಪೂರ್ಣ ವಿವರಣೆಯಿಂದ
(3) ಪಠ್ಯದ ವಿಮರ್ಶಾತ್ಮಕ ನಿರೂಪಣೆ
(4) ಶಿಕ್ಷಕನು ಹೊಂದಿರುವ ವ್ಯಾಕರಣ ಜ್ಞಾನ

26. ಪದ್ಯದ ಒಳಮೈ ಲಕ್ಷಣಗಳು ಪ್ರತಿಬಿಂಬಿಸುವ ಗುಣ
(1) ಪದ್ಯ ಗಾಯನಕ್ಕೆ ಒಪ್ಪುವ ಲಕ್ಷಣ
(2) ಪದ್ಯದ ವೈವಿಧ್ಯತೆ ಮತ್ತು ವಿಸ್ತಾರ
(3) ಪದ್ಯದ ರಚನಾ ಸೂತ್ರಗಳು
(4) ಕವಿಯ ಆಶಯ ಮತ್ತು ಭಾವನೆ

27. ಓದು, ಬರಹಗಳ ಸ್ವಯಂಕಲಿಕೆ, ಅಭ್ಯಾಸ ಹಾಗು ಮೌಲ್ಯಮಾಪನಕ್ಕೆ ಸೂಕ್ತವಾದ ಸಾಧನ
(1) ಸಂಪನ್ಮೂಲ ಪುಸ್ತಕ (2) ಕಪ್ಪುಹಲಗೆ (3) ಅಭ್ಯಾಸ ಪುಸ್ತಕ (4) ಧ್ವನಿ ಮುದ್ರಣ

28. 8 ನೇ ತರಗತಿಯ 30 ವಿದ್ಯಾರ್ಥಿಗಳಲ್ಲಿ 10 ವಿದ್ಯಾರ್ಥಿಗಳು ಕಾಗುಣಿತ ದೋಷಗಳನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಭಾಷಾ ಶಿಕ್ಷಕ ವಹಿಸಬೇಕಾದ ಕ್ರಮ
(1) ಪೋಷಕರಿಗೆ ಮಾಹಿತಿ ನೀಡುವುದು
(2) ಹೆಚ್ಚು ಮನೆಗೆಲಸ ನೀಡುವುದು
(3) ಓದಿನ ಅಭ್ಯಾಸಗಳನ್ನು ನೀಡುವುದು
(4) ಕ್ರಿಯಾ ಸಂಶೋಧನೆ ಕೈಗೊಳ್ಳುವುದು

29. 'ಸಾಬೂನು' ಪದವನ್ನು ಈ ಭಾಷೆಯಿಂದ ಎರವಲು ಪಡೆಯಲಾಗಿದೆ
(1) ಪರ್ಶಿಯನ್ (2) ಪೋರ್ಚುಗೀಸ್ (3) ಇಂಗ್ಲಿಷ್ (4) ಲ್ಯಾಟೀನ್

30. ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಲು ಸೂಕ್ತವಾದ ಸಾಧನ
(1) ವಸ್ತುನಿಷ್ಠ ಪ್ರಶ್ನೆ
(2) ಕಿರು ಉತ್ತರ ಪ್ರಶ್ನೆ
(3) ಪ್ರಬಂಧ ಮಾದರಿ ಪ್ರಶ್ನೆ
(4) ಹೊಂದಿಸಿ ಬರೆಯುವ ಪ್ರಶ್ನೆ

www.prepp.in



## Language – I

## ENGLISH

Read the given passage and answer the questions (Q. Nos. **1 – 8**) that follow by selecting the most appropriate option.

Superstitions cut across caste, communal and even national boundaries. People all over the world have superstitions though they may differ from country to country and region to region. Not even the educated are free from superstitions. In some cases, superstitious beliefs are very deep rooted. Inspite of all evidence to the contrary, people continue to cling to them and allow their lives to be regulated by them. The origin of superstitions can be traced to the element of fear, which is anti-rationalistic, the urge for security and material welfare. Human beings possess a deep seated wish for their physical well-being. They would go to any length to ward off, real or imaginary, danger to their bodies and falling victim to diseases and death. Also the desire for success is so great in human beings, that even the thought of failure unnerves them.

**1.** According to the above passage, superstitions
(1) are only believed in by the educated people.
(2) go above caste, communal and even national boundaries.
(3) are only believed in by the Indians.
(4) are only believed in by uneducated people all over the world.

**2.** People continue to cling to superstitions
(1) due to extensive research on the subject.
(2) hard facts supporting the power of the supernatural.
(3) inspite of all evidence to the contrary.
(4) because of being uneducated.

**3.** The origin of superstitions is rooted in
(1) a fascination with the supernatural.
(2) healthy respect for the supernatural.
(3) higher education.
(4) fear of the unknown, the urge for material welfare.

**4.** The thought of failure unnerves human beings
(1) because they intensely desire success.
(2) because happiness and success go hand in hand.
(3) because it is an ill-omen.
(4) because they are free from superstitions.

**5.** "They would go to any length to <u>ward off</u> danger to their bodies ...."
Here the phrase 'ward off' means
(1) keep with
(2) keep along
(3) keep away
(4) keep in

www.prepp.in



6. "Inspite of all evidence to the contrary, people continue to cling to them ...."
Here 'them' refers to
(1) superstitions (2) educated people
(3) people all over the world (4) uneducated people

7. "Not even the educated are free from superstitions."
The sentence which has the same meaning as the above is
(1) even the educated are free from superstitions.
(2) even the educated are not free from superstitions.
(3) even the uneducated are free from superstitions.
(4) even the educated are superstitious.

8. "<u>Superstitious</u> beliefs are very deep rooted." Here the underlined word is
(1) a noun (2) an adjective
(3) a verb (4) an adverb

Read the given poem and answer the questions (Q. Nos. **9** to **15**) that follow by selecting the most appropriate option.

**The Spelling Bee**

– B.J. Lee

Do you know a spelling bee ?
I know one well, and vow that she
can spell the names of all the flowers
whose sweet nectar she devours.

I took this Spelling Bee with me
and brought her to a spelling bee.
I said, "This way the world can tell
that you, the Spelling Bee, can spell !"

She spelled "Petunia" Quite divine !
And with "Dahlia" she did fine.
Then she missed both "Thigh" and "Thumb,"
but quickly spelled "Chrysanthemum".

So I found out that Spelling Bees
cannot spell all words with ease.
For flower names, they spell with each one,
but other words ? They know none.

www.prepp.in



9. The main idea/theme of the poem is
   (1) A person enters a spelling bee and only spells flower words correctly.
   (2) A person enters a spelling bee, misspells easy words but correctly spells difficult words.
   (3) A person enters a real bee into a spelling bee. The bee spells all the words correctly.
   (4) A person enters a bee into a spelling bee. The bee correctly spells the names of flowers.

10. The genre of the poem is
   (1) fantasy
   (2) historical fiction
   (3) science fiction
   (4) realistic fiction

11. The word misspelt by the Spelling Bee is
   (1) "Petunia"
   (2) "Dahlia"
   (3) "Thigh"
   (4) "Chrysanthemum"

12. "I took this Spelling Bee with me
and brought her to a spelling bee."
Here the underlined word refers to a __________.
   (1) compilation on how to spell words
   (2) real bee who entered the competition
   (3) person who entered the competition
   (4) competition for bees on how to spell words

13. The poet found out that Spelling Bees cannot spell all the words with ease when the Spelling Bee ......
   (1) spelled all the words correctly.
   (2) misspelt "Thigh" and "Thumb".
   (3) misspelt "Chrysanthemum".
   (4) spelt easy words and misspelt difficult ones.

14. The pair of words that does not rhyme is
   (1) Chrysanthemum – thumb
   (2) Flowers – devours
   (3) Bees – trees
   (4) One – own

15. "......... whose sweet nectar she devours."
Here 'devours' means
   (1) eats greedily
   (2) likes to share and eat
   (3) dislikes to eat
   (4) eats to prepare honey

www.prepp.in



Answer the questions **16** to **30** by selecting the most appropriate option :

**16.** Identify the word which has three syllables.
(1) President
(2) Political
(3) Manage
(4) Institution

**17.** Children sometimes use "cutted' as the past tense form of 'cut'. The main reason for errors such as this is
(1) The influence of their mother tongue
(2) Overgeneralization
(3) Fossilization
(4) Children are working out rules for themselves

**18.** The purpose of conducting formative assessment is to
(1) promote the child to the next class
(2) compare scores and grades among children
(3) point out mistakes made by students and report them to parents
(4) help a child improve his/her performance

**19.** One of the methods supported by experts in the field in teaching of grammar is
(1) deductive method
(2) inductive method
(3) error correction method
(4) form-focussed method

**20.** Greeting, informal requests, asking for personal information are used to develop
(1) reading accuracy and literary appreciation among the students
(2) listening skills and comprehension of the listened text
(3) language functions and speaking skills among young learners
(4) writing skill among the learners

**21.** 'A picture dictionary' is the best resource for developing
(1) vocabulary among young children
(2) reading skill among the students
(3) writing stories and paragraphs
(4) communication skills among the young learners

**22.** Some students in the class lag behind their counterparts in learning certain language functions. Such students need
(1) remedial teaching including different activities to acquire those language functions.
(2) more time to complete the language activity.
(3) unlimited time to complete the project/assignment.
(4) frequent tests and feedback.

**23.** The items or elements of language which are essential for the language learner should be presented based on
(1) the principle of gradation
(2) the principle of proportion
(3) the principle of interest
(4) the principle of aural-oral appeal

www.prepp.in



**24.** While reading a text, teacher should
- (1) give the meanings of new words to students.
- (2) encourage students to guess the meanings of new words from the context.
- (3) encourage students to find out the meanings of each and every new word from a dictionary.
- (4) encourage students not to pay attention to new words.

**25.** Students read the passage to find out the answer for the question, "How does a lighthouse work ?". The type of reading involved here is
- (1) reading for gist
- (2) reading for detail
- (3) reading for specific information
- (4) reading for pleasure

**26.** The teacher gives the following instruction to the class :
"Find all the words and phrases you can think of which are connected with wisdom." The aim of this activity is
- (1) grouping vocabulary according to meaning
- (2) focusing on structure
- (3) identifying features of connected speech
- (4) reading for gist

**27.** Jawaharlal Nehru was <u>born with a silver spoon in his mouth</u>.
The underlined idiom in this sentence means
- (1) Born into a poor family
- (2) Born into a family of politicians
- (3) Born in a rich family
- (4) Born into a family of soldiers

**28.** Pick out the sentence with the correct marks of punctuation.
- (1) That tall man, Vijay's grandfather, is this months' winner.
- (2) That tall man Vijay's grandfather is this month's winner.
- (3) That tall man, Vijay's grandfather, is this month's winner.
- (4) That tall man, Vijay's grandfather is this months' winner.

**29.** He said, "Why don't you speak English ?" The reported form of this question is
- (1) He asked why you didn't speak English.
- (2) He asked me whether I didn't speak English.
- (3) He asked me to speak English.
- (4) He asked me why I didn't speak English.

**30.** "I have been teaching English since four years." The type of error in this sentence is
- (1) wrong vocabulary
- (2) wrong tense
- (3) wrong preposition
- (4) wrong word order

www.prepp.in

Prepp
Your Personal Exams Guide



# PART – II
## Language – II : KANNADA
## ದ್ವಿತೀಯ ಭಾಷೆ : ಕನ್ನಡ

ಕೆಳಗಿನ ಗದ್ಯವನ್ನು ಓದಿ, 31 ರಿಂದ 38 ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಡಿವಿಜಿ ರವರು ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಮುಗಿಸಿ ನಂತರ ಮುಂದಿನ ಓದಿಗೆ ತಂದೆ ಮತ್ತು ಅಜ್ಜಿ ಬೇಡವೆಂದರೂ ರಸೂಲ್ ಖಾನ್ ಎಂಬ ಬಂಡಿ ಹೊಡೆಯುವ ವ್ಯಕ್ತಿಯ ಹಠದಂತೆ ಮುಂದಿನ ಓದಿಗಾಗಿ ಬೆಂಗಳೂರಿಗೆ ಬಂದರು. ರಸೂಲ್ ಖಾನ್‌ನ ಈ ನಿರ್ಧಾರ ಎಲ್ಲರನ್ನೂ ದಂಗು ಬಡಿಸಿತು ಹಾಗೂ ಅವನು ಹೇಳಿದಂತೆಯೇ ನಡೆಯಿತು.

ಅವರೇನು ದೊಡ್ಡ ಡಿಗ್ರಿ ಪಡೆದವರಲ್ಲ. ಎಸ್.ಎಸ್.ಎಲ್.ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದರೆ ಹೆಚ್ಚು ಎನ್ನುವಂಥ ಕೆಲಸ. ಸರಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತು ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು. ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಹೇಗೆ ? ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಅರ್ಜಿತ ಪಾಂಡಿತ್ಯ, ಸಾರ್ವಜನಿಕರ ಹಿತಾಸಕ್ತಿಗಳ ಬಲದಿಂದ ಮಿರ್ಜಾರ ಕಾಲಕ್ಕೆ ಡಿವಿಜಿ ಮೇಧಾವಿ ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

ವಿಶ್ವೇಶ್ವರಯ್ಯರವರು ದಿವಾನರಾಗಿದ್ದ ಕಾಲದಲ್ಲಿ ಡಿವಿಜಿ ಯುವ ಪತ್ರಕರ್ತರಾಗಿದ್ದರು. ದಸರಾ ಉತ್ಸವದ ಬಗ್ಗೆ ರಾಜ್ಯದ ಎಲ್ಲಾ ಪತ್ರಿಕೆಗಳು ವಿಶೇಷ ವರದಿ ಮಾಡಿದವು. ಈ ಸಂಬಂಧ ಪತ್ರಕರ್ತರಿಗೆಲ್ಲಾ ಸರ್ಕಾರದಿಂದ ಸಂಭಾವನೆ ನೀಡಲಾಯಿತು. ಡಿವಿಜಿ ತಮಗೆ ಬಂದಿದ್ದ ಹಣ ಸಹಿತ ದಿವಾನರಲ್ಲಿಗೆ ಬಂದು "ವರದಿ ಮಾಡುವುದು ಪತ್ರಕರ್ತರ ಕರ್ತವ್ಯ, ಖರ್ಚಾದ ಹಣವನ್ನು ಪತ್ರಿಕೆಯವರು ಕೊಡಬೇಕು, ಸರ್ಕಾರವಲ್ಲ, ನನಗೆ ಈ ಹಣ ಖಂಡಿತ ಬೇಡ" ಎಂದು ಹಿಂತಿರುಗಿಸಿದರು.

ಡಿವಿಜಿ ರವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. 'ಕನ್ನಡ ಸಾರಸ್ವತ ಲೋಕದ ಭೀಷ್ಮ' ಎಂದು ಕರೆಸಿಕೊಂಡವರು. ಅವರದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇವರು ಕೇವಲ ಸಾಹಿತಿಯಲ್ಲ. ಹೆಸರಾಂತ ಪತ್ರಕರ್ತರು, ಹಿರಿಯ ವೇದಾಂತಿ, ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳುವಳಿಕೆಯುಳ್ಳವರಾಗಿದ್ದರೂ ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ವಿಚಾರಗಳ ಮಂಥನಕ್ಕಾಗಿ 'ಗೋಖಲೆ ಸಾರ್ವಜನಿಕ ಸಂಸ್ಥೆ' ಯನ್ನು ಸ್ಥಾಪಿಸಿದರು. ಇವರ ಮೇಲೆ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳೆಂದರೆ ತಾಯಿಯ ತಾಯಿ ಅಂದರೆ ಅಜ್ಜಿ ಸಾಕಮ್ಮ ಹಾಗೂ ಸೋದರ ಮಾವ ತಿಮ್ಮಪ್ಪ, ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮನ ಹೃದಯಸ್ಪರ್ಶಿಯಾದ ಚಿತ್ರಣವಿದೆ.

31. ಲೋವರ್ ಸೆಕೆಂಡರಿ ನಂತರವೂ ಡಿ.ವಿ.ಜಿ ಇನ್ನೂ ಮುಂದೆ ಓದಬೇಕು ಎಂದು ಹಠ ಹಿಡಿದವರು
    (1) ವಿಶ್ವೇಶ್ವರಯ್ಯ
    (2) ಮಿರ್ಜಾ
    (3) ತಿಮ್ಮಪ್ಪ
    (4) ರಸೂಲ್ ಖಾನ್

32. 'ಪರಮೋಚ್ಚ' - ಈ ಪದವನ್ನು ಬಿಡಿಸಿದಾಗ ಆಗುವ ಸಂಧಿ
    (1) ಸವರ್ಣದೀರ್ಘಸಂಧಿ
    (2) ಗುಣಸಂಧಿ
    (3) ಲೋಪಸಂಧಿ
    (4) ಅನುನಾಸಿಕ ಸಂಧಿ

33. "ವರದಿ ಮಾಡುವುದು ಪತ್ರಕರ್ತರ ಕರ್ತವ್ಯ ಅದಕ್ಕೆ ಖರ್ಚಾದರೆ ಪತ್ರಿಕೆಯವರು ನೀಡುತ್ತಾರೆ, ಸರ್ಕಾರವಲ್ಲ, ನನಗೆ ಈ ಹಣ ಬೇಡ."- ಡಿವಿಜಿ ಯವರ ಈ ಹೇಳಿಕೆ ಏನನ್ನು ಪ್ರತಿನಿಧಿಸುತ್ತದೆ ?
    (1) ಶ್ರೀಮಂತಿಕೆ
    (2) ಕರ್ತವ್ಯ ನಿಷ್ಠೆ
    (3) ಅಹಂಕಾರ
    (4) ಉದಾಸೀನ

www.prepp.in



34. ಸಾಹಿತಿ, ಪತ್ರಕರ್ತ- ಪದಗಳು ಕೆಳಕಂಡ ಈ ವಸ್ತುವಾಚಕಗಳಿಗೆ ಉದಾಹರಣೆಯಾಗಿವೆ.
(1) ರೂಢ ನಾಮ
(2) ಅಂಕಿತ ನಾಮ
(3) ಅನ್ವರ್ಥ ನಾಮ
(4) ಸರ್ವನಾಮ

35. 'ಕನ್ನಡ ಸಾರಸ್ವತ ಲೋಕದ ಭೀಷ್ಮ' ಎಂದು ಕರೆಸಿಕೊಂಡವರು
(1) ಮಿರ್ಜಾ ಇಸ್ಮಾಯಿಲ್
(2) ಸರ್.ಎಂ. ವಿಶ್ವೇಶ್ವರಯ್ಯ
(3) ಡಿ.ವಿ. ಗುಂಡಪ್ಪ
(4) ರಸೂಲ್ ಖಾನ್

36. ಡಿ.ವಿ.ಜಿ. ರವರು 'ಗೋಖಲೆ ಸಾರ್ವಜನಿಕ ಸಂಸ್ಥೆ' ಯನ್ನು ಸ್ಥಾಪಿಸಿದ ಉದ್ದೇಶ
(1) ಸಾಹಿತ್ಯಾಸಕ್ತಿಯಿಂದ
(2) ಸಾರ್ವಜನಿಕ ಹಿತಾಸಕ್ತಿಯಿಂದ
(3) ರಾಜಕಾರಣದ ಆಸಕ್ತಿಯಿಂದ
(4) ಪತ್ರಿಕೋದ್ಯಮದ ಆಸಕ್ತಿಯಿಂದ

37. 'ಮಂಕುತಿಮ್ಮನ, ದಿವಾನರನ್ನು, ದಿಗ್ಗಜರಲ್ಲಿ' - ಈ ಪದಗಳಲ್ಲಿರುವ ವಿಭಕ್ತಿಗಳ ಅನುಕ್ರಮಣಿಕೆ
(1) ಷಷ್ಠೀ, ದ್ವಿತೀಯಾ, ಸಪ್ತಮೀ.
(2) ಪ್ರಥಮಾ, ದ್ವಿತೀಯಾ, ತೃತೀಯಾ.
(3) ದ್ವಿತೀಯಾ, ಚತುರ್ಥಿ, ಪ್ರಥಮಾ.
(4) ಪ್ರಥಮಾ, ಷಷ್ಠೀ, ಸಪ್ತಮೀ.

38. ಡಿ.ವಿ.ಜಿ. ರವರ ಮೇಲೆ ಪ್ರಭಾವ ಬೀರಿದವರು
(1) ತಂದೆ ಮತ್ತು ತಾಯಿ
(2) ಅಜ್ಜಿ ಸಾಕಮ್ಮ
(3) ಸೋದರ ಮಾವ ತಿಮ್ಮಪ್ಪ
(4) ಅಜ್ಜಿ ಮತ್ತು ಸೋದರಮಾವ

ಕೆಳಗಿನ ಗದ್ಯವನ್ನು ಓದಿ 39 ರಿಂದ 45 ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಬೆಳಂಬಾರದ ನಾಟಿ ಔಷಧವು ದೇಶವಿದೇಶಗಳಲ್ಲೂ ಹೆಸರುವಾಸಿ. ಇಲ್ಲಿನ ಆರೋಗ್ಯಧಾಮದಲ್ಲಿರುವ ಅರ್ಧಾಂಗವಾಯು ಪೀಡಿತರನ್ನು ನೋಡಿದರೆ ಎಂತವರಿಗಾದರೂ ಮನ ಕರಗುತ್ತದೆ. ನೂರಾರು ಪಾರ್ಶ್ವವಾಯು ರೋಗಿಗಳಿಗೆ ಮರುಜನ್ಮ ನೀಡಿದ ಹೆಗ್ಗಳಿಕೆ ಬೆಳಂಬಾರದ ನಾಟಿ ಔಷಧಿಯದ್ದು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಮಹಾತ್ಮ ಗಾಂಧೀಜಿಯವರ ಪಾಲಿಗೂ ಈ ಔಷಧ ಚೈತನ್ಯದ ಚಿಲುಮೆಯಾಗಿದ್ದು ಇತಿಹಾಸ. ಬೆಳಂಬಾರ ನಾಟಿ ಔಷಧಿ ತಯಾರಿಕೆಗೆ 200 ವರ್ಷಗಳ ಅನುಭವದ ಪರಂಪರೆಯಿದೆ. ಪಾರ್ಶ್ವವಾಯು ಹೊಡೆತಕ್ಕೆ ಈಡಾದ ಗಾಂಧೀಜಿಯವರಿಗೂ ಇಲ್ಲಿ ಶೈತ್ರೋಪಚಾರ ಮಾಡಲಾಗಿದೆ. ಸಿನಿಮಾ ತಾರೆ ಅಮಿತಾಬ್ ಬಚ್ಚನ್, ಬೌದ್ಧರ ವಿಶ್ವಗುರು ದಲೈಲಾಮ, ಉದ್ಯಮಿ ಧೀರೂಬಾಯಿ ಅಂಬಾನಿ, ಮಾಜಿ ಮುಖ್ಯಮಂತ್ರಿ ದಿ. ವೀರೇಂದ್ರ ಪಾಟೀಲ, ಲೋಕಸಭೆಯ ಮಾಜಿ ಸ್ಪೀಕರ್ ಬಲರಾಮ್ ಜಾಖಡ್, ಕೇಂದ್ರ ಸಚಿವ ಶಂಕರ್ ಪವಾರ್ ಸೇರಿದಂತೆ ವಿವಿಧ ಪ್ರಮುಖರು ಇಲ್ಲಿನ ಔಷಧದಿಂದ ಗುಣಮುಖರಾಗಿದ್ದಾರೆ.

ಇಲ್ಲಿನ ಅರ್ಧಾಂಗವಾಯು ನಾಟಿ ಔಷಧದ ಮೂಲ ಪುರುಷ ಹಾಲಕ್ಕಿ ಸಮಾಜದ ಬೊಮ್ಮು ಗೋವಿಂದ ಗೌಡ. ನಂತರ ಈ ಪದ್ಧತಿಯನ್ನು ಮಗ ಶಿವು ಬೊಮ್ಮುಗೌಡ ಮುಂದುವರೆಸಿದರು. ಇವರ ಕಾಲದಲ್ಲಿಯೇ ಗಾಂಧೀಜಿಯವರು ಇವರಿಂದ ಚಿಕಿತ್ಸೆ ಪಡೆದಿದ್ದರು. ಇಂಗ್ಲೇಂಡ್, ಜರ್ಮನಿ, ಜಪಾನ್, ಶ್ರೀಲಂಕಾ, ಅಮೇರಿಕಾ, ಕೊಲ್ಲಿ ದೇಶಗಳು, ನೇಪಾಳ ಹಾಗೂ ಇನ್ನಿತರ ದೇಶಗಳಿಂದಲೂ ಪಾರ್ಶ್ವವಾಯುವಿಗೆ ತುತ್ತಾದ ಸಾಕಷ್ಟು ಜನ ಇಲ್ಲಿಗೆ ಬಂದು ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಶಿವು ಬೊಮ್ಮುಗೌಡರ ನಂತರ ಅವರ ಮಗ ಬೊಮ್ಮುಶಿವುಗೌಡ ಈ ನಾಟಿ ಔಷಧಿ ಪದ್ಧತಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಮೆಟ್ರಿಕ್ ಕಲಿತ ನಂತರ ಆಯುರ್ವೇದ ಮತ್ತು ಹೋಮಿಯೋಪತಿಯನ್ನು ಅಭ್ಯಾಸ ಮಾಡಿ ನಾಟಿ ವೈದ್ಯ ಪದ್ಧತಿಯನ್ನು ಬದಲಾಗುತ್ತಿರುವ ಸೌಲಭ್ಯಗಳಿಗೆ ಹೊಂದಾಣಿಕೆಯಾಗುವಂತೆ ಆಧುನಿಕ ರೀತಿಯಲ್ಲಿ ಮುಂದುವರೆಸಿದ್ದಾರೆ.

www.prepp.in

Prepp
Your Personal Exams Guide



ಹನುಮಂತಗೌಡ ಓದಿದ್ದು ಎಸ್ಸೆಲ್ಸಿಯಾದರೂ, ಬಳಿಕ ಬೆಂಗಳೂರಿನಲ್ಲಿ ಮೂರು ವರ್ಷ ಆಯುರ್ವೇದಿಕ್-ಯುನಾನಿ ತರಬೇತಿಯನ್ನು ಪಡೆದು, ತಲೆತಲಾಂತರದಿಂದ ಬಂದ ನಾಟಿ ಔಷಧಕ್ಕೆ ಆಧುನಿಕ ಔಷಧ ವಿಜ್ಞಾನದ ಸ್ಪರ್ಶವನ್ನು ನೀಡಿರುವುದು ವಿಶೇಷ. ರೋಗಿಗಳಿಗೆ ಔಷಧವನ್ನು ನೀಡುವ ಜೊತೆಗೆ ದಿನ ನಿತ್ಯದ ವ್ಯಾಯಾಮಕ್ಕಾಗಿ ಹಲವು ಮಾದರಿಯ ಆಧುನಿಕ ಯಂತ್ರಗಳನ್ನು ತಮ್ಮ ಆರೋಗ್ಯಧಾಮ ಆಸ್ಪತ್ರೆಯಲ್ಲಿ ಅಳವಡಿಸಿದ್ದಾರೆ. ಇವರ ಈ ಎಲ್ಲಾ ಸಾಧನೆಗೆ 1995 ರಲ್ಲಿ ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನದಿಂದ 'ನಾಟಿ ವೈದ್ಯ ರತ್ನ' ಪ್ರಶಸ್ತಿ ಲಭಿಸಿದೆ. ಇವರ ಸಾಧನೆಯನ್ನು ಗುರುತಿಸಿ 1997 ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯೂ ಪ್ರಶಸ್ತಿ ನೀಡಿದೆ. 2005 ರಲ್ಲಿ ದೆಹಲಿಯಲ್ಲಿ ಫೆಲೋಶಿಪ್ ಕೂಡಾ ಸಿಕ್ಕಿದೆ.

39. ನೂರಾರು ಪಾರ್ಶ್ವವಾಯು ರೋಗಿಗಳಿಗೆ ನಾಟಿ ಔಷಧ ನೀಡಿ ಮರುಜನ್ಮ ನೀಡಿದ ಹೆಗ್ಗಳಿಕೆಗೆ ಪಾತ್ರರಾದವರು
    (1) ಬೊಮ್ಮು ಗೋವಿಂದಗೌಡ
    (2) ಶಿವಬೊಮ್ಮು ಗೌಡ
    (3) ಹನುಮಂತ ಗೌಡ
    (4) ಬೆಳಂಬಾರ ಕುಟುಂಬದವರು

40. ಆರೋಗ್ಯಧಾಮದಲ್ಲಿ ಚಿಕಿತ್ಸೆ ಪಡೆದ ಖ್ಯಾತನಾಮರಾದ ಉದ್ಯಮಿ
    (1) ಧೀರೂಬಾಯಿ ಅಂಬಾನಿ
    (2) ಬಲರಾಮ್ ಜಾಖಡ್
    (3) ಶಂಕರ್ ಪವಾರ್
    (4) ವಿರೇಂದ್ರ ಪಾಟೀಲ್

41. ಈ ಕೆಳಗಿನ ಪದಗಳಲ್ಲಿ ಶುದ್ಧರೂಪವಲ್ಲದ ಪದ
    (1) ಆಯುರ್ವೇದಿಕ್
    (2) ಪುನರುತ್ತಾನ
    (3) ಪ್ರತಿಷ್ಠಾನ
    (4) ಫೆಲೋಶಿಪ್

42. ಪಾರ್ಶ್ವವಾಯು ಪೀಡಿತರಾದ ಮಹಾತ್ಮಗಾಂಧೀಜಿ ಇವರಿಂದ ಚಿಕಿತ್ಸೆ ಪಡೆದರು
    (1) ಹನುಮಂತ ಗೌಡ
    (2) ಬೊಮ್ಮು ಶಿವುಗೌಡ
    (3) ಶಿವು ಬೊಮ್ಮುಗೌಡ
    (4) ಬೊಮ್ಮು ಗೋವಿಂದ ಗೌಡ

43. ಬೆಳಂಬಾರ ಕುಟುಂಬದ ಸಾಧನೆಗೆ 'ನಾಟಿ ವೈದ್ಯ ರತ್ನ' ಪ್ರಶಸ್ತಿಯನ್ನು 1995 ರಲ್ಲಿ ನೀಡಿ ಪುರಸ್ಕರಿಸಿದವರು
    (1) ರಾಜ್ಯ ಸರಕಾರ
    (2) ಕೇಂದ್ರ ಸರಕಾರ
    (3) ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನ
    (4) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

44. ಚೈತನ್ಯ - ಈ ಪದದಲ್ಲಿ 'ಚೈ' ಎಂಬುದು
    (1) ಸಜಾತೀಯ ಸಂಯುಕ್ತಾಕ್ಷರ
    (2) ವಿಜಾತೀಯ ಸಂಯುಕ್ತಾಕ್ಷರ
    (3) ವ್ಯಂಜನಾಕ್ಷರ
    (4) ಗುಣಿತಾಕ್ಷರ

45. ಆರೋಗ್ಯಧಾಮವನ್ನು ಇತ್ತೀಚೆಗೆ ಆಧುನೀಕರಣಗೊಳಿಸಿ ಈ ಸೌಲಭ್ಯವನ್ನು ನೀಡಲಾಗುತ್ತಿದೆ.
    (1) ನಾಟಿ ಔಷಧದ ಜೊತೆಗೆ ಆಧುನಿಕ ಔಷಧ ಮತ್ತು ತಂತ್ರಜ್ಞಾನದ ಬಳಕೆ
    (2) ಆಯುರ್ವೇದಿಕ್ ಔಷಧ
    (3) ಯುನಾನಿ ಔಷಧ
    (4) ಆಧುನಿಕ ಯಂತ್ರಗಳ ಬಳಕೆ

www.prepp.in



## ಭಾಷಾ ಅಭಿವೃದ್ಧಿಯ ಬೋಧನಾಶಾಸ್ತ್ರ (ಪೆಡಗಾಜಿ) (46 ರಿಂದ 60 ರವರೆಗಿನ ಪ್ರಶ್ನೆಗಳು)

46. ಕಲಿಕಾ ಪ್ರಕ್ರಿಯೆಯೊಂದಿಗೆ ವ್ಯಾಕರಣವನ್ನು ಸಮನ್ವಯಗೊಳಿಸಿ ಕಲಿಸುವುದು
(1) ಸಾಂಪ್ರದಾಯಿಕ ವ್ಯಾಕರಣ
(2) ಕ್ರಿಯಾತ್ಮಕ ವ್ಯಾಕರಣ
(3) ನಿಗಮನ ಪದ್ಧತಿ
(4) ಅನುಗಮನ ಪದ್ಧತಿ

47. ಈ ಕೆಳಗಿನವುಗಳಲ್ಲಿ ಯಾವುದು ಪದ್ಯ ಬೋಧನೆಯ ಪ್ರಮುಖ ಉದ್ದೇಶವಲ್ಲ ?
(1) ಕಲ್ಪನಾಶಕ್ತಿಯನ್ನು ಬೆಳೆಸುವುದು
(2) ರಸಸ್ವಾದ ಅನುಭವವನ್ನುಂಟು ಮಾಡುವುದು
(3) ಲಯಬದ್ಧವಾಗಿ ಹಾಡುವ ಸಾಮರ್ಥ್ಯ ಬೆಳೆಸುವುದು
(4) ಪರೀಕ್ಷೆಗಾಗಿ ಕಂಠಪಾಠ ಮಾಡಿಸುವುದು

48. ತುಟಿಗಳ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು
(1) ಕ ವರ್ಗದ ಅಕ್ಷರಗಳು
(2) ತ ವರ್ಗದ ಅಕ್ಷರಗಳು
(3) ಪ ವರ್ಗದ ಅಕ್ಷರಗಳು
(4) ಚ ವರ್ಗದ ಅಕ್ಷರಗಳು

49. ಕಿರಿಯ ಪ್ರಾಥಮಿಕ ಹಂತದ ಭಾಷಾ ಶಿಕ್ಷಣದಲ್ಲಿ ಹೆಚ್ಚು ಒತ್ತು ನೀಡಬೇಕಾಗಿರುವುದು
(1) ಸಹಜ ಸಂವಹನಕ್ಕೆ
(2) ಭಾಷಾ ಶುದ್ಧತೆಗೆ
(3) ವ್ಯಾಕರಣ ಕಲಿಕೆಗೆ
(4) ಛಂದಸ್ಸಿನ ಪ್ರಯೋಗಕ್ಕೆ

50. ಪ್ರಾರ್ಥನೆ, ಆಟ, ಕಲಿಕಾ-ಬೋಧನಾ ಪ್ರಕ್ರಿಯೆಯ ಸಂದರ್ಭದಲ್ಲಿ ಶಿಕ್ಷಕರು ಕೆಲವು ಸೂಚನೆಗಳನ್ನು ನೀಡುತ್ತಾರೆ. ಇದು ಕೆಳಗಿನ ಈ ಕೌಶಲವನ್ನು ಉತ್ತಮಪಡಿಸುತ್ತದೆ.
(1) ಮಾತನಾಡುವುದು
(2) ಆಲಿಸುವುದು
(3) ಬರೆಯುವುದು
(4) ಓದುವುದು

51. ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ 'ಚುಕ್ಕಿ ಚಿನ್ನಾ', 'ಚಿಣ್ಣರ ಚುಕ್ಕಿ' ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಇವು ಈ ಬೋಧನೋಪಕರಣಕ್ಕೆ ಉದಾಹರಣೆಯಾಗಿವೆ.
(1) ದೃಕ್ ಶ್ರವ್ಯ ಉಪಕರಣಗಳು
(2) ದೃಕ್ ಉಪಕರಣಗಳು
(3) ಶ್ರವ್ಯ ಉಪಕರಣಗಳು
(4) ಸಮೂಹ ಮಾಧ್ಯಮಗಳು

52. ತರಗತಿಯ ಭಾಷಾ ಕಲಿಕೆಯು ಮುಖ್ಯವಾಗಿ ಹೀಗಿರಬೇಕು.
(1) ಭಾಷಾ ಪಠ್ಯಪುಸ್ತಕ ಚೌಕಟ್ಟಿನಲ್ಲಿ ಕಲಿಕೆಯಾಗಬೇಕು
(2) ವ್ಯಾಕರಣ ಕಲಿಕೆಯಿಂದ ಭಾಷಾ ಕಲಿಕೆಯಾಗಬೇಕು
(3) ಸಂವಹನ ಕ್ರಿಯೆಯಿಂದ ಭಾಷಾ ಕಲಿಕೆಯಾಗಬೇಕು
(4) ರಚನಾತ್ಮಕ ಅಭ್ಯಾಸಗಳ ಮೂಲಕ ಕಲಿಕೆಯಾಗಬೇಕು

www.prepp.in



53. 'ಸ್ತ್ರ' - ಈ ಅಕ್ಷರವನ್ನು ಬಿಡಿಸಿ ಬರೆದಾಗ ಸರಿ ಹೊಂದುವ ಸೂಚಿ.
(1) ರ್ + ತ್ + ಸ್ + ಅ
(2) ಸ್ + ರ್ + ತ್ + ಅ
(3) ಅ + ರ್ + ತ್ + ಸ್
(4) ಸ್ + ತ್ + ರ್ + ಅ

54. ಭಾಷಾ ಮೌಲ್ಯಮಾಪನದಲ್ಲಿ ಪ್ರಬಂಧ ಮಾದರಿ ಪ್ರಶ್ನೆಗಳನ್ನು ಅಳವಡಿಸುವ ಪ್ರಮುಖ ಉದ್ದೇಶ
(1) ಸ್ವತಂತ್ರ ಅಭಿವ್ಯಕ್ತಿ ಸಾಮರ್ಥ್ಯ ಮಾಪನ
(2) ಭಾಷೆಯ ಎಲ್ಲಾ ಕೌಶಲಗಳ ಮಾಪನ
(3) ಸಹಪಠ್ಯ ಅಂಶಗಳ ಕಲಿಕೆಯ ಮಾಪನ
(4) ಬೌದ್ಧಿಕ ಬೆಳವಣಿಗೆಯ ಮಾಪನ

55. ವಿದ್ಯಾರ್ಥಿಯೊಬ್ಬ 'ಶಂಕರ' ಪದವನ್ನು 'ಸಂಕರ' ಎಂದು ಉಚ್ಚರಿಸುತ್ತಾನೆ. ಈ ದೋಷವನ್ನು ತಿದ್ದಲು ಶಿಕ್ಷಕ ತೆಗೆದುಕೊಳ್ಳಬಹುದಾದ ಕ್ರಮ
(1) 'ಶ' ಅಕ್ಷರವನ್ನು ಕಂಠಪಾಠ ಮಾಡಿಸುವುದು
(2) 'ಶ' ಅಕ್ಷರವನ್ನು ಹೆಚ್ಚು ಸಾರಿ ಬರೆಸುವುದು
(3) 'ಶ' ಅಕ್ಷರದ ಪದಗಳನ್ನು ಆಲಿಸಲು ಮತ್ತು ಪುನರುಚ್ಚರಿಸಲು ಅವಕಾಶ ನೀಡುವುದು
(4) 'ಶ' ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಸಂಗ್ರಹಿಸುವುದು

56. ಕಂದ ಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ
(1) 12
(2) 20
(3) 32
(4) 64

57. 'ಕವಿನ್ ಪಾದರಸದಂತೆ ಚುರುಕಾದ ಹುಡುಗ'. ಈ ಅಲಂಕಾರದಲ್ಲಿರುವ ಉಪಮಾನ
(1) ಕವಿನ್
(2) ಪಾದರಸ
(3) ಅಂತೆ
(4) ಚುರುಕಾದ

58. 4 ನೇ ತರಗತಿಗೆ ದಾಖಲಾದ ವಿದ್ಯಾರ್ಥಿಯ ಅಪೇಕ್ಷಿತ ಸಾಮರ್ಥ್ಯ ಗಳಿಕೆಯನ್ನು ಮಾಪನ ಮಾಡಿ ಕಂಡು ಬಂದ ಕೊರತೆಗಳನ್ನು ಸರಿಪಡಿಸುವ ವಿಧಾನ
(1) ಪೂರ್ವ ಪರೀಕ್ಷೆ
(2) ಸಾಫಲ್ಯ ಪರೀಕ್ಷೆ
(3) ಪರಿಹಾರ ಬೋಧನೆ
(4) ನೈದಾನಿಕ ಪರೀಕ್ಷೆ

59. ಕೆಳಗಿನ ಪದಗಳಲ್ಲಿ ಇದು ತತ್ಸಮ ಪದ
(1) ಜನ್ಮ
(2) ಜೋಗಿ
(3) ಜವ್ವನ
(4) ಜೂಜು

60. ಭಾಷಾ ಬೋಧಕರು 'ಸಮತೋಲನ ಶಬ್ದಭಂಡಾರ' ವನ್ನು ಮಕ್ಕಳಲ್ಲಿ ಬೆಳೆಸಬೇಕಾಗುತ್ತದೆ, ಎಂದರೆ
(1) ವಿವಿಧ ತರಗತಿ ಮತ್ತು ಕ್ಷೇತ್ರಗಳಲ್ಲಿ ನಿರೀಕ್ಷಿತ ಶಬ್ದ ಸಂಪತ್ತನ್ನು ವೃದ್ಧಿಸುವುದು
(2) ಪಠ್ಯಪುಸ್ತಕಕ್ಕನುಗುಣವಾಗಿ ಶಬ್ದ ಭಂಡಾರ ಹೆಚ್ಚಿಸುವುದು
(3) ಅಭ್ಯಾಸ ಹೆಚ್ಚಿದಂತೆ ಶಬ್ದ ಬಳಕೆ ಹೆಚ್ಚಾಗುವುದು
(4) ಓದುವ ಹವ್ಯಾಸ ಬೆಳೆಸುವುದು

www.prepp.in



## Language – II
## ENGLISH

Read the given passage and answer the questions (Q. Nos. 31 to 38) that follow by selecting the most appropriate option :

